<u>ಅರ್ಜಿಯ ಆದೇಶದ ಮೇರೆಗೆ ದಿನಾಂಕಃ **28-11-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಶ್ರೀ ಸಿ.ಎಮ್.ಎನ್. ಪರವಾಗಿ ಶ್ರೀ ಎಸ್.ಎಲ್.ಎಸ್. ವಕೀಲರಿಂದ ಆರೋಪಿ ಪರಃ</u>

**5.** ಆರೋಪಿಯ ಗಂಡ 6 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ ಅಂದರೆ ಗೊತ್ತಿಲ್ಲ. ಆರೋಪಿ ಗಂಡ ತೀರಿಕೊಂಡ ನಂತರ ಆರೋಪಿ 1 ನೇ ಮಗ ಜಗದೀಶ ಮನೆತನದ ಹಿರಿತನ ಮಾಡುತ್ತಿದ್ದಾರೆ ಅಂದರೆ ಹೌದು. ರಮೇಶ ಮಂಜಪ್ಪ ಕಲಿವಾಳ ಇವರು ಸ್ನೇಹಿತರು ಹೌದು, ಸಂಬಂಧಿಕರು ಹೌದು. ಈ ದಿನ ಅವರು ನ್ಯಾಯಾಲಯಕ್ಕೆ ಬಂದಿರುತ್ತಾರೆ ಅಂದರೆ ಹೌದು. ಆರೋಪಿ 2018-19 ರಿಂದ ಪರಿಚಯ. ಆರೋಪಿ ನನ್ನಿಂದ 3 ರಿಂದ 4 ಬಾರಿ ಹಣ ಪಡೆದುಕೊಂಡಿರುತ್ತಾರೆ. ಎಷ್ಟೆಷ್ಟು ಹಣ ಯಾವ ಯಾವ ದಿನಾಂಕದಂದು ಪಡೆದಿರುತ್ತಾರೆ ಎಂದು ನೆನಪಿಲ್ಲ. ನಾನು ಹಣ ಕೈಗಡ ಕೊಟ್ಟಿದ್ದೆ. ನನ್ನ ಬಳಿ ಇರುವ ಹಣವನ್ನು ಕೊಟ್ಟಿರುತ್ತೇನೆ. 4-5 ಬಾರಿ ಹಣ ಕೊಟ್ಟಿರುತ್ತೇನೆ ಅನ್ನುವ ಬಗ್ಗೆ ನಿಮ್ಮ ಬಳಿ ದಾಖಲೆ ಇಲ್ಲ ಅಂದರೆ ಇಲ್ಲಾ. ಆರೋಪಿ ನಿಮ್ಮ ಕಡೆ 4-5 ಬಾರಿ ಹಣ ಪಡೆದುಕೊಂಡಿರುತ್ತಾರೆ ಅಂತಾ ಸುಳ್ಳು ಬರೆಸಿರುತ್ತೀರಿ ಅಂದರೆ ಸರಿಯಲ್ಲ.

**6.** ಆರೋಪಿಗೆ ನಾನು 2020 ಜನವರಿ ತಿಂಗಳಲ್ಲಿ ಹಣ ಕೊಟ್ಟಿದ್ದೇನೆ. ಆರೋಪಿಗೆ ನಾನು ಒಟ್ಟಿಗೆ ಹಣ ನೀಡಿರುತ್ತೇನೆ. ಹಣದ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಈ ಪ್ರಕರಣದ ಬಗ್ಗೆ ಮಾಹಿತಿಯನ್ನು ನೀಡಿರುತ್ತೇನೆ. ಜನವರಿ 2020 ರಲ್ಲಿ ಆರೋಪಿಗೆ ಹಣ ಕೊಟ್ಟ ಬಗ್ಗೆ ನಿಮ್ಮ ಪಿರ್ಯಾದಿಯಲ್ಲಾಗಲೀ ನೋಟಿಸಿನಲ್ಲಾಗಲೀ ಇಲ್ಲ ಅಂದರೆ ಇಲ್ಲ. 2019 ಸಪ್ಟಂಬರ್ ತಿಂಗಳಲ್ಲಿ ಆರೋಪಿ ಹಣ ನೀಡಿರುತ್ತೇನೆ ಅಂತಾ ಮಾಹಿತಿ ಕೊಟ್ಟಿರುತ್ತೀರಿ ಅಂದರೆ ಹೇಳಿರುವುದಿಲ್ಲ. ಗಣಜೂರಿನ ಆರೋಪಿಯ ಮನೆಯಲ್ಲಿ ಹಣ ಕೊಟ್ಟಿರುತ್ತೇನೆ. ಹಣ ಕೊಡುವಾಗ ಆರೋಪಿ, ಆರೋಪಿಯ ಮಗ ಮತ್ತು ರಮೇಶ ಕಲಿವಾಳ ಇದ್ದರು. ಎಷ್ಟು ಮುಖಬೆಲೆಯ ನೋಟುಗಳ ಹಣವನ್ನು ಕೊಟ್ಟಿರುತ್ತೇನೆ ಅಂತಾ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು 500/- 100/- ಮುಖಬೆಲೆಯ ನೋಟುಗಳನ್ನು ಕೊಟ್ಟಿರುತ್ತೇನೆ. 500/- ಮತ್ತು 100/- ರ ಕಟ್ಟುಗಳು ಎಷ್ಟು

ಇದ್ದವು ಎಂದು ಹೇಳಲು ನೆನಪಿಲ್ಲ. ಹಣವನ್ನು ನಮ್ಮ ಮನೆಯಿಂದ ತಂದಿದ್ದೆ. ಸಪ್ಟಂಬರ್ 2019 ಮತ್ತು ಜನವರಿ 2020 ರಲ್ಲಿ ನಿಮ್ಮ ಖಾತೆಯಿಂದ ಹಣವನ್ನು ಡ್ರಾ ಮಾಡಿರುವುದಿಲ್ಲ ಅಂದರೆ ಅಷ್ಟೊಂದು ಮೊತ್ತದ ಹಣವನ್ನು ಮಾಡಿರುವುದಿಲ್ಲ, ಹಂತ ಹಂತವಾಗಿ ಮಾಡಿರುತ್ತೇನೆ. ಆ ಎರಡು ತಿಂಗಳಲ್ಲಿ ಎಷ್ಟೆಷ್ಟು ಹಣವನ್ನು ಡ್ರಾ ಮಾಡಿರುತ್ತೇನೆ ಎಂದು ಹೇಳಲು ನೆನಪಿಲ್ಲ. ಇಷೊಂದು ಮೊತ್ತದ ಹಣವನ್ನು ಇದೆ ಅಂತಾ ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಅಂದರೆ ಇಲ್ಲಾ. ಇಷ್ಟೊಂದು ಮೊತ್ತದ ಹಣ ಕೊಡುವ ಸಾಮರ್ಥ್ಯ ಇರದೇ ಇರುವ ಕಾರಣ ಹಾಜರು ಪಡಿಸಿರುವುದಿಲ್ಲ ಅಂದರೆ ಸಾಮರ್ಥ್ಯ ಇರುತ್ತದೆ. ನಿಮಗೆ ಸಾಮರ್ಥ್ಯ ಇದ್ದಿದ್ದರೆ 1 ಎಕರೆ ಜಮೀನನ್ನು ಲೀಜಗೆ ಹಾಕುತ್ತಿರಲಿಲ್ಲ ಅಂದರೆ ಹೌದು. ಸಾಕ್ಷಿಯು ದುಡ್ಡಿನ ಅಡಚಣೆಯಿಂದ ಹಾಕಿರುವುದಿಲ್ಲ ಪಕ್ಕದ ಜಮೀನಿಗೆ ಅನುಕೂಲವಾಗಲಿ ಎಂದು ಹಾಕಿರುತ್ತೇನೆ. ಸಪ್ಟಂಬರ್ 2019 ಮತ್ತು ಜನವರಿ 2020 ರಲ್ಲಿ ನೀವು ಹಣವನ್ನು ಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ.

**7.** ಸಾಮಾನ್ಯವಾಗಿ ಕೈಗಡ ಸಾಲ ಪಡೆಯುವಾಗ ಯಾವ ಯಾವ ದಾಖಲೆಗಳನ್ನು ಪಡೆಯುತ್ತಾರೆ ಗೊತ್ತಾ ಅಂತಾ ಕೇಳಿದರೆ ಗೊತ್ತಿಲ್ಲ. ರೂ.4,70,000/- ಹಣವನ್ನು ಕೊಟ್ಟ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಅಂದರೆ ಇಲ್ಲ. ನಿ.ಪಿ.1 ರಲ್ಲಿರುವ ಬರವಣಿಗೆ ಆರೋಪಿಯದ್ದು ಅಲ್ಲ ಅಂದರೆ ಯಾರು ಬರೆದುಕೊಟ್ಟಿರುತ್ತಾರೆ ಅಂದರೆ ಗೊತ್ತಿಲ್ಲ. ಅವರ ಮನೆಯಿಂದ ಚೆಕ್ ತಂದು ಕೊಟ್ಟಿರುತ್ತಾರೆ. ವಕಾಲತನಲ್ಲಿನ ಸಹಿಗೂ ಮತ್ತು ನಿ.ಪಿ.1 ರಲ್ಲಿನ ಸಹಿಗೂ ವ್ಯತ್ಯಾಸ ಇದೆ ಅಂದರೆ ಸರಿಯಲ್ಲ. ಆರೋಪಿಗೆ ಯಾವ ತಾರೀಖಿನಂದು ನೋಟಿಸು ಕೊಟ್ಟಿರುತ್ತೇನೆ ಅಂತಾ ನೆನಪಿರುವುದಿಲ್ಲ. ಚೆಕ್ 23.09.2020 ರಲ್ಲಿ ಅಮಾನ್ಯಗೊಂಡಿರುತ್ತದೆ. ಆರೋಪಿಗೆ ನೋಟಿಸು ತಲುಪಿದ ನಂತರ ಅವಧಿಯ ಒಳಗೆ ದೂರನ್ನು ದಾಖಲೆ ಮಾಡಿರುವುದಿಲ್ಲ ಅಂದರೆ ನೆನಪಿರುವುದಿಲ್ಲ. ಅವಧಿ ಒಳಗೆ ದೂರು ದಾಖಲು ಮಾಡಿರುವುದಕ್ಕೆ ಯಾವುದೇ ಕಾರಣವನ್ನು ದೂರಿನಲ್ಲಾಗಲೀ, ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಅಂದರೆ ಹೇಳಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಆಲಿಸಿ ಮುಂದೂಡಲಾಯಿತು.)

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ**.)**

ಓ ಹೇ ಕೇ ಸರಿ ಇದೆ**.**

-ಸಹಿ-
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.